### ಡಿಯರ್ ‘ಸುಧಾ’,

ನಾನು ಬಹಳಷ್ಟು ವರ್ಷಗಳಿಂದ ನಿನ್ನನ್ನು ಓದುತ್ತಿದ್ದೇನೆ. ನಿನ್ನಲ್ಲಿ ಓದಿರುವುದನ್ನು ಕಾಯಾ, ವಾಚಾ, ಮನಸಾ ನಂಬಿ ಅದರಂತೆಯೇ ನಡೆಯುತ್ತಿದ್ದೇನೆ. ಬೇರೆಯವರಲ್ಲಿ ಮಾತನಾಡುವಾಗ, ಬಹಳಷ್ಟು ಬಾರಿ ನಿನ್ನನ್ನು ಉದಾಹರಿಸಿದ್ದೇನೆ.

ಅದರಲ್ಲೂ ಕೋವಿಡ್ ನಂತರ ನೀನು ತುಂಬಾ ಬದಲಾಗಿದ್ದೀಯ.

ಈಗ ನೀನು ಅದ್ಭುತವಾದ ಫೆಮಿನಿಸ್ಟ್ ಆಗಿದ್ದೀಯ. ಸೋ ಕಾಲ್ಡ್ ಅಲ್ಲ... ಯಾರೂ ಹೇಳಲಾಗದ, ಹೇಳಲು ಹಿಂಜರಿಯುವ ಮಹಿಳೆಯರ ಒಳ ತುಮುಲಗಳನ್ನು ನೀನು ನಿರ್ಭಿಡೆಯಿಂದ ಹೇಳುತ್ತಾ ಬಂದಿದ್ದೀಯ. ಇಡೀ ಜಗತ್ತಿನ ವಿರೋಧ ಎದುರಿಸಬೇಕು ಎಂಬ ಅರಿವಿದ್ದರೂ, ನೀನು ರಾಜಿ ಮಾಡಿಕೊಳ್ಳದೇ ಬರೆದಿದ್ದೀಯ.


ಉದಾಹರಣೆಗೆ, ಹೆಣ್ಣುಮಕ್ಕಳು ಈಗ ಮದುವೆಯಾದರೂ ಮಕ್ಕಳು ಮಾಡಿಕೊಳ್ಳದೇ ಇರುವ ಬಗ್ಗೆ... ಮಹಿಳೆಯರ ಒಂಟಿ ಜೀವನದ ಬಗ್ಗೆ... ಮದುವೆಯ ನಂತರ ಆಕೆಯ ವ್ಯಕ್ತಿತ್ವದ ಮೇಲೆ ಆಗುವ ದಾಳಿಯ ಬಗ್ಗೆ... ಮೊನ್ನೆ ತಾನೇ ಬರೆದಿದ್ದ ಸಿಂಗಲ್ ಪೇರೆಂಟಿಂಗ್ ಬಗ್ಗೆ...

ಈ ವಿಷಯಗಳನ್ನು ಆಯಾ ಪರಿಣತರು ಅದ್ಭುತವಾಗಿ, ಯಾರ ಮನಸ್ಸಿಗೂ ನೋವಾಗದ ಹಾಗೆ, ಎದುರಿಗೆ ಇರುವ ಸಮಸ್ಯೆಯನ್ನು ಬಿಡಿಸಿ ಹೇಳಿದ್ದರು. ಪ್ರತಿಯೊಂದು ವಿಷಯ ಬಹಳ ಸೂಕ್ಷ್ಮವಾಗಿದ್ದರೂ, ಯಾವುದೇ ವಿವಾದ ಆಗದೇ ಇರುವ ಹಾಗೆ, ಜಾಣ್ಮೆಯಿಂದ, ಹೆಣ್ಣಿನ ಸಮಸ್ಯೆಗಳನ್ನು ಜಗತ್ತಿನ ಮುಂದೆ ಅನಾವರಣ ಮಾಡಿದ್ದರು. ಅವರೇನು ಸುಮ್ಮನೆ ಹೇಳಿದವರಲ್ಲ. ಲಕ್ಷಾಂತರ ಕೇಸುಗಳನ್ನು ಅಧ್ಯಯನ ಮಾಡಿ, ಈ ನಿರ್ಧಾರಕ್ಕೆ ಬಂದವರು.

ಆದರೆ ಗೆಳತೀ... ನನಗೆ ಬೇಸರವಾಗಿದ್ದು ಯಾರಿಂದ ಗೊತ್ತಾ?

ಇಷ್ಟೆಲ್ಲಾ ಸಮಸ್ಯೆಗಳಿವೆ ಅಂತ ಮನಮುಟ್ಟುವಂತೆ ಹೇಳಿದರೂ, ಕೆಲವರು ‘ಅಜ್ಜ ಹಾಕಿದ ಆಲದ ಮರ’ವನ್ನು ಬಿಡದೇ, ಆತ್ಮವಿಮರ್ಶೆ ಮಾಡಿಕೊಳ್ಳದೇ, ಸುತ್ತ ನಡೆಯುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸದೇ, ಯಾವುದೋ ಒಂದೆರಡು ಉದಾಹರಣೆಗಳಿಂದ ಇಡೀ ಹೆಣ್ಣುಕುಲವೇ ಸರಿ ಇಲ್ಲ ಅಂತ ಷರಾ ಬರೆದು, ಈ ಲೇಖನಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾರಲ್ಲ... ಅವರಿಂದ. ಇವರು ಬದಲಾಗುವುದೇ ಇಲ್ಲವೇ? ಹೇಳಬೇಕೆನ್ನಿಸಿತು. ಹೇಳಿದೆ.

—ಕೆ.ಎ. ಸೌಮ್ಯ, ಮೈಸೂರು




### ಗಮನಾರ್ಹ ಸಾಧನೆ

‘ಐಎಂಡಿ– 150: ಭಾರತೀಯ ಹವಾಮಾನ ಇಲಾಖೆ ನೂರೈವತ್ತು ವರ್ಷಗಳ ಪಕ್ಷಿನೋಟ’ (ಮೇ 22, ಕೋಡಿಬೆಟ್ಟು ರಾಜಲಕ್ಷ್ಮಿ) ಮುಖಪುಟ ಲೇಖನ ಸಕಾಲಿಕವಾಗಿದೆ.

ಸ್ವಾತಂತ್ರ್ಯಪೂರ್ವದಿಂದ ಹಿಡಿದು ಇಂದಿನವರೆಗೂ ಸಮರ್ಥವಾಗಿ ಕಾರ್ಯನಿರ್ವಹಣೆ ಮಾಡುತ್ತಾ, ತನ್ನ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಾ ಸಾಗಿರುವ ಭಾರತೀಯ ಹವಾಮಾನ ಇಲಾಖೆಯ ಸಾಧನೆ ಗಮನಾರ್ಹವಾದುದು. ಒಂದು ಅತ್ಯುತ್ತಮ ಲೇಖನ.

—ರಾಜಣ್ಣ ಡಿ.ಎಸ್., ಬೆಂಗಳೂರು

### ಕಣ್ಣಿಗೆ ಕಟ್ಟಿದ ದೃಶ್ಯಗಳು

‘ಡಿ ವಾಲ್ಲೆನ್; ಆಮ್‌ಸ್ಟರ್‌ಡ್ಯಾಂನ ಕೆಂಪುದೀಪದ ಬೀದಿಯಲ್ಲಿ...’ (ಮೇ 22, ವಸಂತ ಕಲ್‌ಬಾಗಲ್) ಪ್ರವಾಸ ಚಿಂತನ ಬಹಳ ಚೆನ್ನಾಗಿದೆ. ಸರಳ ಭಾಷೆ, ನೇರ ನಿರೂಪಣೆ. World's oldest profession ಕುರಿತು ಅವರ ಚಿತ್ರಣ ವಿಷಾದ ಭಾವ ತಂದಿತು. ಹೊಟ್ಟೆಯ ರಗಳೆ ಎಲ್ಲಿಂದ ಎಲ್ಲಿ ಹೋದರೂ



ಒಂದೇ ರೀತಿ ಕಾಡುತ್ತದೆ. ಹಸಿವು ಮಾಡಿಸದಿರುವ ಕಸುಬು ಉಂಟೇ?

ವಯಸ್ಸಾದವರೂ ಯುವತಿಯರಂತೆ ಕಾಣಲು ಕೃತಕಾಲಂಕಾರ ಮಾಡಿಕೊಂಡು ಗಿರಾಕಿಗಳನ್ನು ಆಕರ್ಷಿಸುವುದು, ಕರುಳು ಚುರ್ ಎನ್ನಿಸುತ್ತೆ. ದೃಶ್ಯ ವಿವರಣೆ ಕಣ್ಣಿಗೆ ಕಟ್ಟಿದಂತಿದೆ.

—ಜೆ. ರಾಮಲಿಂಗೇಗೌಡ, ಮೈಸೂರು

### ಕೂಡಿ ಬಾಳುವ ವಿವೇಕ

‘ಬುದ್ಧಮಾರ್ಗ’ (ಮೇ 22, ಜಿ.ಪಿ. ಆನಂದಮೂರ್ತಿ) ‘ವಿಚಾರ ಲಹರಿ’, ಯಾರಿಗೂ ಕೇಡು ಬಯಸದೆ, ಎಲ್ಲರೊಡನೆ ಕೂಡಿ ಬಾಳುವ ನಿಸರ್ಗ ವಿವೇಕವನ್ನು ನಾವೆಲ್ಲಾ ನಮ್ಮ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ನಡೆಯುವುದೇ ನಿಜವಾದ ಬುದ್ಧಮಾರ್ಗ ಎಂಬುದನ್ನು ತುಂಬಾ ಮನಮುಟ್ಟುವಂತೆ ಪ್ರಸ್ತುತಪಡಿಸಲಾಗಿದೆ.

—ಎಂ.ಜಿ. ರಾಮಚಂದ್ರ, ಶಿವಮೊಗ್ಗ

### ಸ್ಫೂರ್ತಿಯ ಚಿಲುಮೆ

‘ಕರ್ನಲ್ ಸೋಫಿಯಾ’ (ಮೇ 22, ಪ್ರವೀಣ ಕುಲಕರ್ಣಿ) ‘ಸೆಲೆಬ್ರಿಟಿ’ ಅಂಕಣದಲ್ಲಿ ಖುರೇಷಿಯವರ ಪರಿಚಯ ತುಂಬಾ ಅರ್ಥಪೂರ್ಣವಾಗಿತ್ತು. ಭಾರತದ ರಕ್ಷಣೆಯ ಹೊಣೆ ಹೊತ್ತಿರುವ ಯೋಧರಿಗೊಂದು ಸಲಾಂ ಎನ್ನುವಾಗ ಯೋಧರಲ್ಲಿ ಮಹಿಳೆಯ ಪಾತ್ರ ಇರುತ್ತದೆ ಎಂದು ಈವರೆಗೆ ತಿಳಿಯಲು ಸಾಧ್ಯವಾಗಿರಲಿಲ್ಲ. ‘ಹೆಣ್ ಮಕ್ಳೆ ಸ್ಟ್ರಾಂಗು’ ಎನ್ನುವುದು ಓದಿನಲ್ಲಿ, ಸಂಸಾರ ನಿಭಾಯಿಸುವಲ್ಲಿ ಮಾತ್ರ ಎಂದುಕೊಂಡಿದ್ದವರಿಗೆ ಎಂತಹ ಕಾರ್ಯವನ್ನಾದರೂ ಮಹಿಳೆಯರು ಮಾಡುತ್ತಾರೆಂಬುದಕ್ಕೆ ಸೋಫಿಯಾ ಉತ್ತಮ ಉದಾಹರಣೆ. ಅವರು ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

### ಬದುಕಿನ ಸೂತ್ರ!

“WATCH; ಎಲ್ಲರ ಪಾಲಿನ ‘ಪಂಚಾಕ್ಷರಿ’” (ಮೇ 22, ಟಿ. ಕೃಷ್ಣಮೂರ್ತಿ) ಬದುಕಿನ ಸೂತ್ರವನ್ನು ಸೊಗಸಾಗಿ ವ್ಯಾಖ್ಯಾನಿಸುವ ಒಂದು ಸ್ಫೂರ್ತಿದಾಯಕ ಲೇಖನ.

—ಅರುಣ್ ಕುಮಾರ್ ತಾರಾನಾಥ್

### ಸಂತೆಯ ಮಜವೇ ಬೇರೆ



‘ಸಂತೆಯೆಂಬ ಪುಟ್ಟ ಪ್ರಪಂಚದೊಳಗೆ’ (ಮೇ 22, ಸಂಜೋತಾ ಪುರೋಹಿತ್) ಪ್ರಬಂಧ ಓದುತ್ತಾ ಇದ್ದ ಹಾಗೆ ಸಂತೆಯ ಒಳಗೆ ಓಡಾಡಿಕೊಂಡು ಬಂದ ಹಾಗೆ ಭಾಸವಾಯಿತು. ವಸ್ತುಗಳನ್ನು ಮಾರಾಟ ಮಾಡುವವರ ಹೆಸರು ಹಾಗೂ ಅವರು ಮಾರಾಟ ಮಾಡುವ ರೀತಿಯನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಬಯಸಿದ್ದನ್ನು ಮನೆ ಬಾಗಿಲಿಗೆ ತರಿಸಿಕೊಳ್ಳುವ ಈಗಿನ ಕಾಲದಲ್ಲಿ ವಾರಕ್ಕೊಮ್ಮೆ ಬರುವ ಸಂತೆಗಾಗಿ ಕಾದು ಬೇಕಾಗಿರುವ ಸಾಮಗ್ರಿಗಳನ್ನು ತೆಗೆದುಕೊಂಡು ಬರುತ್ತಿದ್ದ ಮಜವೇ ಬೇರೆ.

—ಕವಿತ ಅಶೋಕ್, ನೆಲಮಂಗಲ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in